Sri VEERENDRA PATIL:—Before any water supply work is taken up we get chemical analysis of the water. If the water is unhealthy I do not think the P.W.D. will take up that work.

Subsidy to Private Primary Schools.

*Q.—75. Smt. G. C. BHAGEERATHAMMA (Tumkur).—

Will the Government be pleased to state :—

(*a*) the amount of subsidy that is being paid to private Primary Schools in the State ;

(*b*) the average of amount paid to the Schools in the Old Mysore Area and the average amount paid to such Schools in the New Mysore ?

A.—Sri S. R. KANTHI (Minister for Education).—

(*a*) As a rule no subsidy is paid to the Private Primary Schools in the State. Where Government or Local Body Schools do not exist, Private Primary Schools can claim grant-in-aid according to rules.

(*b*) Does not arise in view of the reply to clause (a) above.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಸರಕಾರಿ ಪ್ರಾಥಮಿಕ ಶಾಲೆ ಇಲ್ಲದೇ ಇರತಕ್ಕ ಸ್ಥಳದಲ್ಲಿ ಪ್ರೈವೇಟ್ ಪ್ರಾಥಮಿಕ ಶಾಲೆಗೆ ಕೊಡತಕ್ಕ ಗ್ರಾಂಟಿನಲ್ಲಿ ರಾಜ್ಯದ ಬೇರೆ ಬೇರೆ ಪ್ರದೇಶದಲ್ಲಿ ವ್ಯತ್ಯಾಸವೇನಾದರೂ ಇದೆಯೇ ? ಇದ್ದರೆ ಏನು ವ್ಯತ್ಯಾಸ ಇದೆ ?

† ಶ್ರೀ ಎಸ್. ಆರ್. ಕಂಠಿ.— ವ್ಯತ್ಯಾಸ ಈ ರೀತಿ ಇದೆ—

ಹಳೇ ಮೈಸೂರಿನಲ್ಲಿ.— ಸೇಕಡ 75ರಷ್ಟು ಮೇಂಟೆನನ್ಸ್ ಗ್ರಾಂಟ್
ಸೇಕಡ 50ರಷ್ಟು ಎಕ್ವಿಪ್‌ಮೆಂಟ್ ಗ್ರಾಂಟ್
ಸೇಕಡ 50ರಷ್ಟು ಬಿಲ್ಡಿಂಗ್ ಗ್ರಾಂಟ್

ಎಕ್ಸ್ ಮದ್ರಾಸ್‌ನಲ್ಲಿ. — ಸೇಕಡ 12ರಷ್ಟು ಟೀಚಿಂಗ್ ಗ್ರಾಂಟ್
ಸೇಕಡ 50ರಷ್ಟು ಎಕ್ವಿಪ್‌ಮೆಂಟ್ ಗ್ರಾಂಟ್
ಸೇಕಡ 50ರಷ್ಟು ಬಿಲ್ಡಿಂಗ್ ಗ್ರಾಂಟ್

ಎಕ್ಸ್ ಹೈದರಾಬಾದ್ ಪ್ರದೇಶದಲ್ಲಿ.—ಸೇಕಡ 66.13 ಮೇಂಟೆನನ್ಸ್ ಗ್ರಾಂಟ್
ಸೇಕಡ 50ರಷ್ಟು ಎಕ್ವಿಪ್‌ಮೆಂಟ್ ಗ್ರಾಂಟ್
ಸೇಕಡ 50ರಷ್ಟು ಬಿಲ್ಡಿಂಗ್ ಗ್ರಾಂಟ್

ಮುಂಬಯಿ ಕರ್ನಾಟಕ ಪ್ರದೇಶದಲ್ಲಿ.—ಒಬ್ಬ ವಿದ್ಯಾರ್ಥಿಗೆ 10 ಆಥವಾ 12 ಈ ರೇಟಿನಿಂದ ಕೊಡಲಾಗುವುದು. ಎಕ್ವಿಪ್‌ಮೆಂಟ್ ಗ್ರಾಂಟ್ ಬಿಲ್ಡಿಂಗ್ ಗ್ರಾಂಟ್ ಇಲ್ಲ.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—ನಾನಾ ಭಾಗದಲ್ಲಿ ನಾನಾ ರೀತಿಯಿಂದ ಇರುವುದನ್ನು ಏಕರೂಪತೆ ತರುವುದಕ್ಕೆ ಪ್ರಯತ್ನ ಮಾಡಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಹಾಗೆ ಮಾಡಲು ಸಾಧ್ಯವಾಗುವುದಿಲ್ಲ. ಏಕೆಂದರೆ ಬೇರೆ ಬೇರೆ ಕಡೆ ಬೇರೆ ಬೇರೆ ತರಹ ಅಡ್ಮಿನಿಸ್ಟ್ರೇಷನ್ ಇವೆ ಎಲ್ಲ ಕಡೆ ಅಡ್ಮಿನಿಸ್ಟ್ರೇಷನ್ ಒಂದೇ ತರಹ ಮಾಡಿದರೆ ಆದು ಸಾಧ್ಯವಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ಏಕರೂಪತೆ ತರುವುದರಿಂದ ಹಳೇ ಮೈಸೂರು ಪ್ರದೇಶಕ್ಕೆ ಬಹಳ ಅನ್ಯಾಯವಾಗಿದೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ದಕ್ಷಿಣಕನ್ನಡ ಬಟ್ಟರೆ ಹಳೇ ಮೈಸೂರಿನಲ್ಲಿ ಹೆಚ್ಚು ಸಿಕ್ಕುತ್ತದೆ. ಆದುದರಿಂದ ಕಡಿಮೆಯಾಗುತ್ತದೆ ಎಂದು ಅನ್ನಿಸುವುದಿಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಪ್ರೈವೇಟ್ ಶಾಲೆಗಳಿಗೆ ಮೇಂಟೆನನ್ಸ್ ಗ್ರಾಂಟ್ ಸಿಕ್ಕದೆ ಶಾಲೆ ಮುಚ್ಚಿಬಿಡುವ ಪರಿಸ್ಥಿತಿ ಬಂದಿದೆ ಎಂಬ ವಿಷಯದಲ್ಲಿ ಮನವಿ ಸರಕಾರಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಸರಕಾರಕ್ಕೆ ಮನವಿ ಬಂದಿದೆ. ರೂರ್ಸ್‌ಪ್ರಕಾರ ಗ್ರಾಂಟ್ ಕೊಡುತ್ತಿದ್ದಾರೆ. ಅದಕ್ಕಿಂತ ಜಾಸ್ತಿ ಮಾಡಲು ಸಾಧ್ಯವಿಲ್ಲ.

ಶ್ರೀ ಟಿ. ಬೈರಪ್ಪಾಜಿ.—ಹಳೇ ಮೈಸೂರು ವಿಲೀನಾದಲ್ಲಿ ಹುಡುಗರ ಸಂಖ್ಯೆ ಹೆಚ್ಚಾಗಿರುವ ಸ್ಥಳದಲ್ಲಿ ಖಾಸಗಿ ಪ್ರಾಥಮಿಕ ಶಾಲೆಗೆ ಸರಕಾರ ಗ್ರಾಂಟ್ ಕೊಡುವುದಕ್ಕೆ ವಿರ್ಪಾಡು ಮಾಡುತ್ತಾರೆಯೇ ?

ಶ್ರೀ ಎಸ್. ಆರ್. ಕಂಠಿ.—ರೂರ್ಸ್ ಪ್ರಕಾರ ಏನು ಸಾಧ್ಯವೋ ಅದನ್ನು ಮಾಡುತ್ತೇವೆ. ಹುಡುಗರ ಸಂಖ್ಯೆ ಹೆಚ್ಚಾಗಿ ಇದ್ದರೆ ಪ್ರೈವೇಟ್ ಶಾಲೆ ತೆರೆಯಲು ಅವಕಾಶ ಕೊಡುವುದಿಲ್ಲ. ಆದರೆ ಸರಕಾರ ಶಾಲೆ ಪ್ರಾರಂಭಿಸುತ್ತದೆ.

ಶ್ರೀ ಎಸ್. ಶಿವಪ್ಪ.—ಮೈಸೂರು ದೇಶದಲ್ಲಿ ಎಷ್ಟು ವಿದ್ಯಾ ಇಲಾಖೆಗಳು ಇವೆ ? ವಿದ್ಯಾ ಇಲಾಖೆಗಳಲ್ಲಿ ಎಷ್ಟು ರೀತಿ ಇವೆ ?

ಶ್ರೀ ಎಸ್. ಆರ್. ಕಂಠಿ.—ವಿದ್ಯಾ ಇಲಾಖೆ ಇರುವುದು ಒಂದೇ. ಡಿ. ಪಿ. ಐ. ಆಫೀಸ್ ಇದೆ. ಪ್ರೈವೇಟ್ ಎಜ್ಯುಕೇಷನ್ ಅವರು ನೋಡಿಕೊಳ್ಳುತ್ತಾರೆ. ಸೆಕೆಂಡರಿ ಎಜ್ಯುಕೇಷನ್ ಅವರೇ ನೋಡಿಕೊಳ್ಳುತ್ತಾರೆ. ಇನ್‌ಫರ್‌ಮೇಷನ್ ಬೇಕಾದರೆ ಅವರನ್ನು ಕೇಳಬಹುದು.

ಶ್ರೀ ಎಸ್. ಗೋಪಾಲಗೌಡ.—ನ್ಯಾಯ, ಪ್ರಾಥಮಿಕ ವಿದ್ಯಾಭ್ಯಾಸವು ಉಚಿತವಾಗಿರಬೇಕು ಕಡ್ಡಾಯವಾಗಿರಬೇಕು ಎಂಬ ತತ್ವವನ್ನು ಮಾನ್ಯ ಮಾಡಿರುವಾಗ್ಗೆ ಪ್ರಾಥಮಿಕ ವಿದ್ಯಾಭ್ಯಾಸದ ಬಗ್ಗೆ, ಖಾಸಗಿ ಶಾಲೆಗಳಿಗೆ ಅನುಮತಿ ಕೊಟ್ಟರುವುದು ಸರಿಯೇ ? ಹಾಗು ಶಾಲೆಗಳಿಗೆ ಏಕರೂಪತೆಗೆ ಅನುಗುಣವಾಗಿ ಒಂದೇ ರೀತಿಯಾಗಿ ಗ್ರಾಂಟ್ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳದೇ ಇರುವುದು ತಪ್ಪು ಅಲ್ಲವೇ ?

Sri S. R. KANTHI.—It is a complicated question and we will not be able to take up this immediately. Panchayat Raj Bill contains some provisions and details. There is a proposal to get up a Committee to go into the entire question.

ಶ್ರೀ ಬಿ. ಭಾಸ್ಕರಶೆಟ್ಟಿ.—ದಕ್ಷಿಣಕನ್ನಡ ಜಿಲ್ಲೆಯಲ್ಲಿರತಕ್ಕ ಪಾಠಶಾಲೆಗಳಿಗೆ ಈಗ ಕೊಡುತ್ತಿರುವ ಗ್ರಾಂಟ್ ಇನ್‌ಏಡ್ ಬಹಳ ಕಡಮೆಯಾಗಿರುವುದರಿಂದ, ಅವುಗಳನ್ನು ಮೆಂಟೇನ್ ಮಾಡುವುದು ಬಹಳ ಕಷ್ಟವಾಗಿದೆ, ಆದುದರಿಂದ ಅದನ್ನು ಶೇಕಡ 15ಕ್ಕಾದರೂ ಏರಿಸುವುದಕ್ಕೆ ಸಲಹೆ ಮಾಡುತ್ತಾರೆಯೇ ?

Mr. SPEAKER.—Next Question.

Sri S. R. KANTHI.—Sir,.....

Mr. SPEAKER.—The Hon'ble member and the Minister are making me helpless. I have not allowed the supplementary. I have called the next Question. The Hon'ble Member may meet the Hon'ble Minister in his chambers and get the information.

Maralavadi Tank Work.

*Q.—165. Sri S. KARIAPPA (Kanakapura).—

Will the Government be pleased to state :—

(*a*) whether any estimate for raising the bund and waste weir of aralavadi Tank in Kanakapura Taluk has been prepared ;

(*b*) if so, the date of preparation of the same ;

(*c*) what is the estimated cost ?